# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1030 (1021)** |
| **ಸದಸ್ಯರ ಹೆಸರು** | : | **ಶ್ರೀ ವೈ. ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | : | **16-12-2025** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವನಿಕರ ಸ್ವತ್ತಿನ ತೆರಿಗೆಯನ್ನು ಪಾವತಿಸಲು ಪಾಲಿಕೆಗೆ ಕಟ್ಟಿರುವ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ದುರುಪಯೋಗವಾಗಿರುವ ಮೊತ್ತವೆಷ್ಟು; ಇದರ ಪೂರ್ಣ ವಿವರಗಳ ಮಾಹಿತಿ ಒದಗಿಸುವುದು; | ಬಂದಿದೆ.<br><br>ಬಳ್ಳಾರಿ ಮಹಾನಗರಪಾಲಿಕೆ ವ್ಯಾಪ್ತಿಯ ವಾರ್ಡ್ ನಂ 19 ರಲ್ಲಿನ ಅಪಾರ್ಟ್ ಮೆಂಟ್ ಒಂದರ 35 ಪ್ಲಾಟ್‌ಗಳಿಗೆ ಆಸ್ತಿ ತೆರಿಗೆಯ ಮೊತ್ತ ರೂ.2,80,179/-ಗಳನ್ನು ಮಾಲೀಕರಿಂದ ಸಂಗ್ರಹಿಸಿ ಪಾಲಿಕೆಯ ಖಾತೆಗೆ ಜಮಾ ಮಾಡದೇ ಮೊತ್ತವನ್ನು ದುರುಪಯೋಗ ಪಡಿಸಿಕೊಂಡಿರುವುದಲ್ಲದೇ ಹಣ ಪಾವತಿಯ ನಕಲಿ ರಶೀದಿಗಳನ್ನು ಸೃಷ್ಟಿಸಿ ಪಾಲಿಕೆಯ ನೌಕರರುಗಳಾದ 1. ಶ್ರೀ ಕೆ. ದೊಡ್ಡ ಬಸಪ್ಪ, ದ್ವಿತೀಯ ದರ್ಜೆ ಸಹಾಯಕರು, 2. ಶ್ರೀ ಮನೋಹರ್, ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು, 3. ಶ್ರೀ ಎನ್. ವೀರೇಶ್ ಕುಮಾರ್, ಸಹಾಯಕ ಕಂದಾಯ ಅಧಿಕಾರಿ ಇವರುಗಳು ಮನೆ ಮಾಲೀಕರಿಗೆ ನೀಡಿರುತ್ತಾರೆ. |
| (ಆ) | ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿನ ತೆರಿಗೆ ಹಣ ದುರುಪಯೋಗದಲ್ಲಿ ಭಾಗಿಯಾಗಿರುವ ಅಧಿಕಾರಿ ಸಿಬ್ಬಂದಿಗಳ ವಿವರಗಳೊಂದಿಗೆ ಅವರುಗಳ ಮೇಲೆ ತೆಗೆದುಕೊಂಡ ಕಾನೂನು ಕ್ರಮಗಳ ಪೂರ್ವ ವಿವರಗಳ ಮಾಹಿತಿ ಒದಗಿಸುವುದು; | ಪಾಲಿಕೆಯ ತೆರಿಗೆ ಹಣ ದುರುಪಯೋಗವಾಗಿರುವ ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿ/ಸಿಬ್ಬಂದಿಗಳ ವಿವರ ಈ ಕೆಳಕಂಡಂತಿದೆ:-<br><br>1) ಕರವಸೂಲಿಗಾರರಾದ ಶ್ರೀ ಕೆ. ದೊಡ್ಡಬಸಪ್ಪ, (ಮೂಲ ದ್ವಿತೀಯ ದರ್ಜೆ ಸಹಾಯಕ) ಇವರನ್ನು ದಿನಾಂಕ:17.12.2024 ರಂದು ಸೇವೆಯಿಂದ ಅಮಾನತ್ತುಗೊಳಿಸಿ ಪುನಃ ದಿನಾಂಕ:06.06.2025 ರಂದು ಇಲಾಖಾ ವಿಚಾರಣೆ ಬಾಕಿ ಇರಿಸಿ ಸೇವೆಗೆ ಪುನರ್ ಸ್ಥಾಪಿಸಲಾಗಿರುತ್ತದೆ.<br><br>2) ಶ್ರೀ ಮನೋಹರ್, ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು ಇವರನ್ನು ದಿನಾಂಕ:16.11.2024ರಂದು ಸೇವೆಯಿಂದ ಅಮಾನತ್ತುಗೊಳಿಸಿ ಪುನಃ ದಿನಾಂಕ: 06.06.2025 ರಂದು ಇಲಾಖಾ ವಿಚಾರಣೆ ಬಾಕಿ ಇರಿಸಿ ಸೇವೆಗೆ ಪುನರ್ ಸ್ಥಾಪಿಸಲಾಗಿರುತ್ತದೆ.<br><br>3) ಶ್ರೀ ಎನ್ ವೀರೇಶ್ ಕುಮಾರ್, ಕಂದಾಯ ಅಧಿಕಾರಿ (ಪ್ರಭಾರ) (ಮೂಲ ಹುದ್ದೆ ಸಹಾಯಕ ಕಂದಾಯ (ಅಧಿಕಾರಿ) ರವರು ಸ್ವಂತ ವೇತನ ಶ್ರೇಣಿಯ ಮೇಲೆ 2021 |

| | | |
|---|---|---|
| | | ರಿಂದ ಈವರೆಗೂ ಕರ್ತವ್ಯ ನಿರ್ವಹಿಸುತ್ತಿದ್ದು ಸದರಿಯವರ ವಿರುದ್ಧವೂ ಸಹ ಇಲಾಖಾ ವಿಚಾರಣೆ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗಿರುತ್ತದೆ.<br><br>ಹಣ ದುರುಪಯೋಗದಲ್ಲಿ ಭಾಗಿಯಾಗಿರುವ ಮೇಲ್ಕಂಡ ಅಧಿಕಾರಿ/ನೌಕರರ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳಲು ಉದ್ದೇಶಿಸಿ ಮಾನ್ಯ ನಿವೃತ್ತ ನ್ಯಾಯಾಧೀಶರಾದ ಶ್ರೀ ಈಶ್ವರ್ ಜಂತ್ಲಿ, ದಾವಣಗೆರೆ ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ಹಾಗೂ ಈ ಹಿಂದಿನ ಸಾಂಖ್ಯಿಕ ಅಧಿಕಾರಿಗಳಾದ ಶ್ರೀ ರಮೇಶ್ ಸಹಾಯಕ ನಿರ್ದೇಶಕರು ಇವರನ್ನು ಮಂಡನಾಧಿಕಾರಿಯನ್ನಾಗಿ ಆದೇಶಿಸಲಾಗಿರುತ್ತದೆ.<br><br>ಇಲಾಖಾ ವಿಚಾರಣೆಯು ಪ್ರಗತಿಯಲ್ಲಿದ್ದು ಇಲಾಖಾ ವಿಚಾರಣಾ ವರದಿಯು ಸ್ವೀಕೃತಗೊಂಡ ನಂತರ ವಿಚಾರಣಾ ವರದಿಯನ್ನಾಧರಿಸಿ ಮುಂದಿನ ಸೂಕ್ತ ಕ್ರಮ ಜರುಗಿಸಲಾಗುವುದು.<br><br>ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಬಳ್ಳಾರಿಯ ಗಾಂಧಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನ ವರದಿ ಸಂಖ್ಯೆ:0135/2024 ರನ್ವಯ ಪ್ರಕರಣ ದಾಖಲಿಸಲಾಗಿರುತ್ತದೆ. |
| (ಇ) | ಮುಂದಿನ ದಿನಗಳಲ್ಲಿ ಇಂತಹ ಹಗರಣ ಮರುಕಳಿಸದಂತೆ ತಡೆಯಲು ಸರ್ಕಾರದಿಂದ ಯಾವ ಕ್ರಮ ಜರುಗಿಸಲಾಗಿದೆ? | ಇಂತಹ ಹಗರಣಗಳು ಮರುಕಳಿಸದಂತೆ ತಡೆಯಲು ವಿಶೇಷ ಲೆಕ್ಕ ಪತ್ರ ತಪಾಸಣೆ ಕೈಗೊಳ್ಳಲು ಆರ್ಥಿಕ ಇಲಾಖೆಗೆ ಶಿಫಾರಸ್ಸು ಮಾಡಲು ಅಥವಾ ನೇರವಾಗಿ ವಿಶೇಷ ತನಿಖಾ ತಂಡವನ್ನು ರಚಿಸಿ ಬಳ್ಳಾರಿ ಮಹಾನಗರಪಾಲಿಕೆಗೆ ನಿಯೋಜಿಸುವಂತೆ ಆಯುಕ್ತರು, ಬಳ್ಳಾರಿ ಮಹಾನಗರ ಪಾಲಿಕೆ ಇವರು ಪೌರಾಡಳಿತ ನಿರ್ದೇಶನಾಲಯವನ್ನು ಕೋರಿದ್ದರ ಹಿನ್ನೆಲೆಯಲ್ಲಿ, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ವಿಶೇಷ ಲೆಕ್ಕ ಪರಿಶೋಧನಾ ತಂಡವನ್ನು ರಚಿಸಿರುತ್ತಾರೆ. |

**ನಅಇ 54 ಎಬಿಸಿ 2025(ಇ)**

**(ಬಿ. ಎಸ್. ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ ಯೋಜನೆ
ಸಚಿವರು.